**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**
**(ಆಸೀನ ಶ್ರೀರಂಗಪಟ್ಟಣ)**

**ಎಸ್ ಸಿ ಸಂಖ್ಯೆಃ 5072/2025**

ಪಿರ್ಯಾದುದಾರರುಃ ಶ್ರೀರಂಗಪಟ್ಟಣ ವಲಯ ಅರಣ್ಯ ಅಧಿಕಾರಿ

- ವಿರುದ್ಧ -

1 ನೇ ಆರೋಪಿಃ ಸಿ. ವೆಂಕಟೇಶ

**ದೋಷಾರೋಪಣೆ**

ಶ್ರೀಮತಿ ಜ್ಯೋತ್ಸ್ನಾ ಡಿ., ಎಲ್‌ಎಲ್.ಬಿ., ಎಲ್‌ಎಲ್.ಎಂ., ಡಿ.ಎಫ್.ಎ., 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ (ಆಸೀನ ಶ್ರೀರಂಗಪಟ್ಟಣ) ರವರಾದ ನಾನು ಆರೋಪಿಯಾದ

1. ಸಿ. ವೆಂಕಟೇಶ್ ಬಿನ್ ಸೋಟಯ್ಯ,
   ವಯಸ್ಸುಃ 38 ವರ್ಷಗಳು,
   ವಾಸಃ ರಾಮದೊಡ್ಡಿ ಗ್ರಾಮ,
   ಕುಂಬಳಮ್ಮ ಪಂಚಾಯತ್,
   ಕೃಷ್ಣಗಿರಿ ತಾಲ್ಲೂಕು,
   ಧರ್ಮಪುರಿ ಜಿಲ್ಲೆ,
   ತಮಿಳುನಾಡು ರಾಜ್ಯ.

ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ರಚಿಸಿರುತ್ತೇನೆ.

- - -

ಮೊದಲನೆಯದಾಗಿ ದಿನಾಂಕಃ 09.06.2025 ರಂದು ಮಂಡ್ಯ ಪ್ರಾದೇಶಿಕ ವಿಭಾಗ, ಶ್ರೀರಂಗಪಟ್ಟಣ ಪ್ರಾದೇಶಿಕ ವಲಯ, ಕೆ.ಶೆಟ್ಟಿಹಳ್ಳಿ ಮೀಸಲು ಅರಣ್ಯ ಪ್ರದೇಶದ ಕರಿಘಟ್ಟ ಏತ ನೀರಾವರಿ ಕಾಲುವೆ ಪಕ್ಕದ ಹಳ್ಳದಲ್ಲಿ ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಅರಣ್ಯ

ಪಾಲಕರು ಮತ್ತು ಸಿಬ್ಬಂದಿಗಳು ರಾತ್ರಿ ಸಮಯದಲ್ಲಿ ಗಸ್ತು ತಿರುಗುತ್ತಿದ್ದಾಗ ಯಾರೋ ಆಸಾಮಿಗಳು ಅರಣ್ಯ ಪ್ರದೇಶದಲ್ಲಿ ಮರ ತುಂಡರಿಸುತ್ತಿರುವ ಶಬ್ದವನ್ನು ಗಮನಿಸಿ ಸದರಿ ಸ್ಥಳಕ್ಕೆ ಬಂದಾಗ 1 ನೇ ಆರೋಪಿಯಾದ ನೀನು ಹಾಗೂ ಆರೋಪಿ 2 ರವರು ಕಾಡಿನಲ್ಲಿರುವ ಒಣಗಿದ ಶ್ರೀಗಂಧದ ಮರದ ಬುಡಗಳನ್ನು ಭೂಮಿಯಿಂದ ಹೊರಗೆ ಕಿತ್ತು ತೆಗೆದುಕೊಂಡು ಹೋಗಿ ಮಾರಾಟ ಮಾಡುವ ಉದ್ದೇಶವನ್ನು ಹೊಂದಿ ಅರಣ್ಯ ಪ್ರದೇಶಕ್ಕೆ ಅತಿಕ್ರಮ ಪ್ರವೇಶಿಸಿ ಕತ್ತಿ ಮತ್ತು ಹಾರೆಯೊಂದಿಗೆ ಶ್ರೀಗಂಧದ ಮರದ ಬುಡಗಳನ್ನು ಕಿತ್ತು ಅರಣ್ಯ ಸಂಪತ್ತನ್ನು ನಾಶಪಡಿಸಿರುತ್ತೀರಿ. ಈ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಕರ್ನಾಟಕ ಅರಣ್ಯ ಕಾಯ್ದೆ, 1963 ಕಲಂ 24 ಸಿ(2) ಮತ್ತು 24(ಇ) ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತಿ.

2. ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀನು ಆರೋಪಿ 2 ರವರೊಂದಿಗೆ ಕತ್ತಿ ಮತ್ತು ಹಾರೆಯೊಂದಿಗೆ ಅನುಮತಿಯಿಲ್ಲದೇ ಅರಣ್ಯ ಪ್ರದೇಶವನ್ನು ಪ್ರವೇಶಿಸಿ ನೀನು ಕಾಡಿನಲ್ಲಿರುವ ಶ್ರೀಗಂಧದ ಮರದ ಬುಡಗಳನ್ನು ಭೂಮಿಯಿಂದ ಕಿತ್ತು ತೆಗೆದಾಗ ಆರೋಪಿ 2 ರವರು ಮತ್ತು ನೀನು ಅಕ್ರಮವಾಗಿ ಕಿತ್ತು ತೆಗೆದ ಶ್ರೀಗಂಧದ ಮರದ ಕೆಲ ಬೇರುಗಳನ್ನು ಚೀಲದಲ್ಲಿ ತುಂಬಿಕೊಂಡು ಮಾರಾಟ ಮಾಡಲು ಪ್ರಯತ್ನಿಸಿರುತ್ತೀರಿ. ಈ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಕರ್ನಾಟಕ ಅರಣ್ಯ ಕಾಯ್ದೆ, 1963 ಕಲಂ 84, 86 ಮತ್ತು ಕರ್ನಾಟಕ ಅರಣ್ಯ ನಿಯಮ 144 ರ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತಿ.

1 ನೇ ಆರೋಪಿಯಾದ ನೀನು ಮೇಲಿನ ದೋಷಾರೋಪಣೆಯ ಬಗ್ಗೆ ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತಿದ್ದೇನೆ.

(ಜ್ಯೋತ್ಸ್ನಾ ಡಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**
**(ಆಸೀನ ಶ್ರೀರಂಗಪಟ್ಟಣ)**

**ಎಸ್ ಸಿ ಸಂಖ್ಯೆ: 5072/2025**

ಪಿರ್ಯಾದುದಾರರು ಶ್ರೀರಂಗಪಟ್ಟಣ ವಲಯ ಅರಣ್ಯ ಅಧಿಕಾರಿ

- ವಿರುದ್ಧ -

1 ನೇ ಆರೋಪಿ ಸಿ. ವೆಂಕಟೇಶ

**ದೋಷಾರೋಪಣೆಗೆ ಆರೋಪಿಯು ನೀಡಿದ ಉತ್ತರ**

1. ಕನ್ನಡ ಭಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆಯ ಅಂಶಗಳು ನಿಮಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

2. ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತ್ತರ: ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

ಈ ಪ್ರಕರಣದ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಪಡೆದುಕೊಳ್ಳಲಾಯಿತು.

(ಜ್ಯೋತ್ಸ್ನಾ ಡಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).

ಆರೋಪಿ ಸಹಿ